





# ಮಹಾ ರಸಿಕ!

ಮಹಾಭಾರತದ ಕೃಷ್ಣನಿಗೆ 16 ಸಾವಿರ ಹೆಂಡಿರು ಹಾಗೂ 60 ಸಾವಿರ ಮಕ್ಕಳು ಎಂಬ ಕಥೆ ಇದೆ. ಅದು ಪುರಾಣದ ಕಥೆ. ಅದರಲ್ಲಿ ಸತ್ಯ ಏನಿದೆಯೋ.. ಎಷ್ಟಿದೆಯೋ?!

ಆದರೆ ಈ ಕೀತ್ ಮ್ಯಾಕ್‌ಡೊನಾಲ್ಡ್ ಮಹಾರಸಿಕ. ಬ್ರಿಟನ್ನಿನ ನಿರುದ್ಯೋಗಿ ಕೀತ್, 25ರ ಹರೆಯದಲ್ಲೇ 8 ಮಕ್ಕಳ ತಂದೆ! ಅದೂ 8 ಜನ ಬೇರೆ ಬೇರೆ ಹೆಂಗಸರಲ್ಲಿ! ಅಷ್ಟೇ ಅಲ್ಲ– ಒಂಭತ್ತನೆಯ ಹಾಗೂ ಹತ್ತನೆಯ ಪತ್ನಿಯರು ಇಷ್ಟರಲ್ಲೇ ಮ್ಯಾಕ್‌ಡೊನಾಲ್ಡನ ಮಕ್ಕಳಿಗೆ ಜನ್ಮ ನೀಡಲಿದ್ದಾರೆ!

ಹಳೆಯ ಗೆಳತಿಯರನ್ನು ಮರೆತು, ಹೊಸ ಹೆಣ್ಣುಗಳ ಬೇಟೆಗೆ ಹೊರಡುವ ಈತ ಬ್ರಿಟನ್ನಿನ ಅತಿ ಕೆಟ್ಟ ತಂದೆ ಎಂಬ ‘ಕೀರ್ತಿ’ ಪಡೆದಿದ್ದಾನೆ. ತನ್ನ 10ನೇ ವಯಸ್ಸಿನಲ್ಲೇ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ ಈತ, 15ನೇ ವಯಸ್ಸಿಗೇ ಮೊದಲ ಮಗು ಪಡೆದಿದ್ದಾನೆ. ಹತ್ತು ವರ್ಷಗಳಲ್ಲಿ, ಹತ್ತು ಹೆಂಗಸರಿಗೆ ಹತ್ತು ಮಕ್ಕಳನ್ನು ಕರುಣಿಸಿದ ಈತ ಎಂದೂ ಕಾಂಡೋಮ್ ಬಳಸುವದಿಲ್ಲವಂತೆ. ಈವರೆಗೆ 40 ಜನ ಮಹಿಳೆಯರೊಂದಿಗೆ ಶಯ್ಯಾಗೃಹವನ್ನು ಬಳಸಿರುವುದಾಗಿ ಈತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಇನ್ನೂ ವಿಚಿತ್ರವೆಂದರೆ ಈತ ಬಹುತೇಕ ಮಹಿಳೆಯರನ್ನು ಪುಸಲಾಯಿಸಿ ತನ್ನ ಬಲೆಗೆ ಬೀಳಿಸಿಕೊಂಡದ್ದು ಸಾರ್ವಜನಿಕ ಬಸ್ ನಿಲ್ದಾಣಗಳಲ್ಲಿಯಂತೆ!

25 ವರ್ಷ ವಯಸ್ಸಿನಲ್ಲೇ ಇಷ್ಟೆಲ್ಲ ಕಾರುಬಾರು ಮಾಡಿದವನು, ಇನ್ನೂ ಉಳಿದಿರುವ ಆಯುಷ್ಯದಲ್ಲಿ ಇನ್ನೇನೇನು ಮಾಡುತ್ತಾನೋ?!

–ಸುಭಾಸ ಯಾದವಾಡ